ಇ) ಇಂತಹ ಅರ್ಜಿಗಳನ್ನು ಕೂಡಲೇ ವಿಲೇ ಮಾಡುವುದಕ್ಕೆ ಸರ್ಕಾರ ಕೈಗೊಳ್ಳುವ ಕ್ರಮವೇನು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ಪ್ರಸ್ತುತ 4404 ನಮೂನೆ 53ರ ಅರ್ಜಿಗಳು ವಿಲೇ ಆಗದೇ ಬಾಕಿ ಇವೆ.

ಆ) ಹೌದು.

ಇ) ಹಾಲೀ ತಾಲ್ಲೂಕು ಕಛೇರಿಯಲ್ಲಿ ಒಬ್ಬ ತಾಲ್ಲೂಕು ಮೋಜಣಿದಾರರಿದ್ದು, ಉಳಿದಂತೆ ಭೂಮಾಪನ ಇಲಾಖೆಯಿಂದ ಮತ್ತೊಬ್ಬ ಮೋಜಣಿದಾರರನ್ನು ಸದರಿ ಅರ್ಜಿಗಳ ಪರಿಶೀಲನೆ ಹಾಗೂ ಅಳತೆಗಾಗಿ ನಿಯೋಜಿಸಲಾಗಿರುತ್ತೆ. ಇವರುಗಳು ಈಗಾಗಲೇ ಅಳತೆ ಕಾರ್ಯ ನಡೆಸುತ್ತಿರುತ್ತಾರೆ. ಇನ್ನೂ ಶೀಘ್ರ ಪ್ರಗತಿಗಾಗಿ 3-4 ಮೋಜಣಿದಾರರನ್ನು ಈ ಕಾರ್ಯಕ್ಕಾಗಿ ಹೆಚ್ಚುವರಿಯಾಗಿ ನಿಯೋಜಿಸಲು ಎ.ಡಿ.ಎಲ್.ಆರ್. ಜೆ.ಡಿ.ಎಲ್.ಆರ್ ರವರನ್ನು ಕೋರಲಾಗಿದೆ. ರಾಜಸ್ವ ನಿರೀಕ್ಷಕರುಗಳಿಂದ, ಹಾಲೀ ಇರುವ ಮೋಜಣಿದಾರರಿಂದ ಅಲ್ಲದೇ ಹೆಚ್ಚುವರಿ ಮೋಜಣಿದಾರರನ್ನು ಭೂಮಾಪನ ಇಲಾಖೆಯಿಂದ ಆದಷ್ಟು ಬೇಗ ಪಡೆದು ಬಾಕಿ ಇರುವ ಅರ್ಜಿಗಳನ್ನು ವಿಲೇಮಾಡಲಾಗುವುದು.

ಬೆಂಗಳೂರು ನಗರದಲ್ಲಿ ವಾಯು ಮಾಲಿನ್ಯ ಹೆಚ್ಚಳ

629 (1027) ಶ್ರೀ ದಿನೇಶ್ ಗುಂಡುರಾವ್ (ಗಾಂಧಿನಗರ): ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ನಗರದಲ್ಲಿ ವಾಯು ಮಾಲಿನ್ಯದ ಪ್ರಮಾಣ ದಿನದಿಂದ ದಿನಕ್ಕೆ ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ವಾಯು ಮಾಲಿನ್ಯ ಹೆಚ್ಚಳದ ಪರಿಣಾಮದಿಂದ ಇಲ್ಲಿನ ನಿವಾಸಿಗಳು ಅದರಲ್ಲಿಯೂ ವಿಶೇಷವಾಗಿ ಮಕ್ಕಳು ವಿವಿಧ ರೀತಿಯ ರೋಗಗಳಿಗೆ ಬಲಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ವಾಯು ಮಾಲಿನ್ಯ ಹೆಚ್ಚಳದಿಂದ ಯಾವ ಯಾವ ರೋಗಗಳು ಬರುತ್ತಿವೆ; ಹಾಗೂ ಈ ರೋಗಗಳಿಗೆ ಕಳೆದ ಮೂರು ವರ್ಷಗಳಲ್ಲಿ ಬಲಿಯಾದ ಮಕ್ಕಳ ಸಂಖ್ಯೆ ಎಷ್ಟು; (ವರ್ಷವಾರು ವಿವರ ನೀಡುವುದು);

ಈ) ಹೆಚ್ಚುತ್ತಿರುವ ವಾಯು ಮಾಲಿನ್ಯ ನಿಯಂತ್ರಣಕ್ಕೆ ಕಳೆದ ಮೂರು ವರ್ಷಗಳಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ಹೌದು.

ಆ) ಇಲ್ಲ.

ಇ) ವಾಯು ಮಾಲಿನ್ಯದಿಂದಾಗಿ ಈ ಕೆಳಕಂಡ ರೋಗಗಳು ಉಂಟಾಗುತ್ತವೆ.

(i) ಶ್ವಾಸನಾಳದ ನವೆ, ಶ್ವಾಸಕೋಶದ ಅತಿ ಪ್ರತಿಕ್ರಿಯೆ ಶ್ವಾಸ ಕೋಶದ ರಕ್ಷಣಾ ಕ್ರಿಯೆಯಲ್ಲಿ ವ್ಯತ್ಯಯ

(ii) ಕೆಮ್ಮು, ಉಬ್ಬಸ, ಉಸಿರಾಟದ ತೊಂದರೆ.

(iii) ಶ್ವಾಸಕೋಶದ ಅರ್ಬುದ ರೋಗ

(iv) ಚರ್ಮದ ಅಲರ್ಜಿ

(v) ಮಕ್ಕಳಲ್ಲಿ ನರಸಂಬಂಧಿ ಮಾನಸಿಕ ಬೆಳವಣಿಗೆಯಲ್ಲಿನ ವ್ಯತ್ಯಯ ಅನ್ವಯಿಸುವುದಿಲ್ಲ.

ಈ) (ಅ) ಬೆಂಗಳೂರಿನಲ್ಲಿ ವಾಯು ಮಾಲಿನ್ಯ ನಿಯಂತ್ರಿಸಲು ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಕಾರ್ಯಾಚರಣೆ ಪಡೆಯನ್ನು ರಚಿಸಲಾಗಿದೆ.

(ಆ) ಬೆಂಗಳೂರು ನಗರದಲ್ಲಿ 167 ವಾಯು ಮಾಲಿನ್ಯ ತಪಾಸಣೆ ಕೇಂದ್ರಗಳನ್ನು ಸ್ಥಾಪಿಸಲಾಗಿದೆ ಮತ್ತು ಇವುಗಳಲ್ಲಿ 126 ಗಣಕೀಕೃತ ಕೇಂದ್ರಗಳಾಗಿವೆ.

(ಇ) ಸಾರಿಗೆ ಇಲಾಖೆ ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗಳ ಜಂಟಿ ಉಸ್ತುವಾರಿಯಲ್ಲಿ ಬೆಂಗಳೂರು ನಗರದಲ್ಲಿನ ವಾಹನಗಳಿಂದಾಗುವ ವಾಯು ಮಾಲಿನ್ಯವನ್ನು ನಿಯಂತ್ರಿಸಲು 5 ಪರಿಸರ ವಾಹಿನಿ ವಾಹನಗಳು ಮತ್ತು ಒಂದು ಸಂಚಾರಿ ಮೇಲ್ವಿಚಾರಣಾ ವಾಹನ ಕಾರ್ಯನಿರ್ವಹಿಸುತ್ತಿವೆ.

(ಈ) ಬೆಂಗಳೂರಿನ ಪ್ರಮುಖ ಸ್ಥಳಗಳಲ್ಲಿ ಪರಿವೇಷ್ಟಕ ವಾಯು ಗುಣಮಾಪನ ಮೇಲ್ವಿಚಾರಣಾ ಘಟಕಗಳು ಕಾರ್ಯನಿರ್ವಹಿಸುತ್ತಿವೆ.

(ಉ) ದಿನಾಂಕ 1-7-2003 ರಿಂದ ಅನ್ವಯವಾಗುವಂತೆ ಮೂರು ಹಂತಗಳಲ್ಲಿ 15 ವರ್ಷ ಮತ್ತು ಮೇಲ್ಪಟ್ಟ ವಾಹನಗಳು ಬೆಂಗಳೂರು ನಗರವನ್ನು ಹೊರ ವರ್ತುಲ ರಸ್ತೆಯಿಂದ ಪ್ರವೇಶಿಸದಂತೆ ನಿಷೇಧಿಸಲಾಗಿದೆ.

(ಊ) ಜೂನ್ 2003 ರಿಂದ ಶೇಕಡ 5 ರಷ್ಟು ಇಥೆನಾಲ್ ಮಿಶ್ರಣ ಮಾಡಿದ ಪೆಟ್ರೋಲ್ ವಿತರಿಸಲಾಗುವುದು.

(ಋ) ಮೋಟಾರು ವಾಹನ ಕಾಯಿದೆಯಡಿ ತ್ರಿಚಕ್ರ ವಾಹನಗಳು ದ್ವಿ-ಇಂಧನ (ಪೆಟ್ರೋಲ್ ಮತ್ತು ಎಲ್‌ಪಿಜಿ) ಅಳವಡಿಸಲು ಅನುಮತಿಸಲಾಗಿದೆ.

(ಎ) ಕಳೆದ ಮೂರು ವರ್ಷಗಳಲ್ಲಿ 9,89,723 ವಾಹನಗಳನ್ನು ಪರೀಕ್ಷಿಸಿ 27,814 ವಾಹನಗಳಿಂದ ಒಟ್ಟು ರೂ. 34,59,650 ದಂಡವನ್ನು ಸಂಗ್ರಹಿಸಲಾಗಿದೆ ಎಂದು ಸಾರಿಗೆ ಇಲಾಖೆ ವರದಿ ಮಾಡಿದೆ.

(ಏ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಸಾರಿಗೆ ಇಲಾಖೆಯ ಸಹಯೋಗದೊಂದಿಗೆ ಬೆಂಗಳೂರು ನಗರದಲ್ಲಿ ಸಾಮೂಹಿಕ ಜನಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ಮಿತವೇತನ ಪದವೀಧರರಿಗೆ ಪಿಂಚಣಿ ಸೌಲಭ್ಯ

630 (983) ಶ್ರೀ ಡೊಂಗರಗಾಂವ್ ಶಿವಜಹಾನ್ ಇಸ್ಮಾಯಿಲ್ (ಅಥಣಿ): ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1977 ರಿಂದ 1979ರವರೆಗೆ ನೇಮಕ ಮಾಡಿದ ಮಿತವೇತನ ಪದವೀಧರರಿಗೆ 1994 ರಲ್ಲಿ ಸರ್ಕಾರಿ ಸೇವೆಯಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಿ ಗ್ರಾಮ ಲೆಕ್ಕಿಗಾರಾಗಿ ವಿಲೀನಗೊಳಿಸಿದ್ದು ಕೆಲವರು 2 ವರ್ಷಗಳಲ್ಲಿ ನಿವೃತ್ತಿ ವಯೋಮಿತಿ ತಲುಪಿ ಯಾವ ಸೌಲಭ್ಯಗಳು ದೊರೆಯದೆ ನಿವೃತ್ತಿ ಹೊಂದಿರುವುದು ಹಾಗೂ ಕೆಲವರಿಗೆ ಇಲ್ಲಿಯವರಿಗೆ ಹಿಂದೆ ಸೇವೆ ಸಲ್ಲಿಸಿದ ಸೇವೆಯನ್ನು